40 ಹಳೆಯ ವಾಹನಗಳನ್ನು ಅನುಪಯುಕ್ತಗೊಳಿಸಿ ಹೊಸ ವಾಹನಗಳನ್ನು ಒದಗಿಸಲಾಗುವುದು.

ಈ) ಪ್ರಸ್ತುತ 4 ಅನುಸೂಚಿಗಳಿಗೆ ಬೇಡಿಕೆ ಇದ್ದು ಅವುಗಳನ್ನು ಕೂಡಲೇ ಪ್ರಾರಂಭಿಸಲಾಗುವುದು.

ಪ್ರಶ್ನೆ ಸಂಖ್ಯೆ : 84 (218) ಶ್ರೀ ಸೋಮಲಿಂಗಪ್ಪ ಎಂ.ಎಸ್. (ಶಿರಗುಪ್ಪ)

ಮಾನ್ಯ ಲೋಕೋಪಯೋಗಿ ಹಾಗೂ ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ

1) ಶಿರುಗುಪ್ಪ ಕ್ಷೇತ್ರದಲ್ಲಿ ಹರಿಯುವ ತುಂಗಭದ್ರ ನದಿಗೆ ನಿಟ್ಟೂರು ಮತು ಸಿಂಗಪೂರ ನಡುವೆ ಸೇತುವೆ ನಿರ್ಮಾಣ ಮಾಡುವ ಅಶವ್ಯಕತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

2) ಹಾಗಿದ್ದಲ್ಲಿ, ಯಾವಾಗ ಸೇತುವೆ ನಿರ್ಮಾಣ ಮಾಡಲಾಗುವುದು?

ಶ್ರೀ ಹೆಚ್.ಡಿ.ರೇವಣ್ಣ

1) ಬಂದಿದೆ

2) ಈ ಸೇತುವೆಯ ನಿರ್ಮಾಣದ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದ್ದು, ಅನುದಾನದ ಲಭ್ಯತೆಯ ಅನುಗುಣವಾಗಿ ಕಾಮಗಾರಿಯನ್ನು ಕೈಗೊಳ್ಳಲು ಪರಿಗಣಿಸಲಾಗುವುದು.

ಪ್ರಶ್ನೆ ಸಂಖ್ಯೆ : 85 (126) ಶ್ರೀ ಸುರೇಶ್ ಎಸ್.ಮಾರಿಹಾಳ (ಕಿತ್ತೂರು)

ಮಾನ್ಯ ಲೋಕೋಪಯೋಗಿ ಹಾಗೂ ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ

ಅ. ಕಿತ್ತೂರು ಮತಕ್ಷೇತ್ರದಲ್ಲಿ 2005-06, 2006-07ನೇ ಸಾಲಿನಲ್ಲಿ ಲೆಕ್ಕಶೀರ್ಷಿಕೆ 5054 ಅಡಿಯಲ್ಲಿ ಮಂಜೂರಾದ ಕಾಮಗಾರಿಗಳು ಯಾವುವು

ಹಾಗೂ ಮಂಜೂರಾದ ಅನುದಾನವೆಷ್ಟು?

ಆ. 2005–06ನೇ ಸಾಲಿನಲ್ಲಿ ಲೆಕ್ಕಶೀರ್ಷಿಕೆ 5054 ಅಡಿಯಲ್ಲಿ ಮಂಜೂರಾದ ಕಾಮಗಾರಿಗಳನ್ನು ಗುತ್ತಿಗೆದಾರರು ಇದುವರೆಗೆ ಕಾರ್ಯಾರಂಭ ಗೊಳಿಸದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ. ಹಾಗಿದ್ದಲ್ಲಿ ಅವರುಗಳ ವಿರುದ್ಧ ಸರ್ಕಾರ ಯಾವ ಕ್ರಮ ಕೈಗೊಂಡಿದೆ?

ಶ್ರೀ ಹೆಚ್.ಡಿ.ರೇವಣ್ಣ

ಅ) ಕಿತ್ತೂರು ಮತಕ್ಷೇತ್ರದಲ್ಲಿ 2005–06, 2006–07ನೇ ಸಾಲಿನಲ್ಲಿ ಲೆಕ್ಕಶೀರ್ಷಿಕೆ 5054 ಅಡಿಯಲ್ಲಿ ಮಂಜೂರಾದ ಕಾಮಗಾರಿಗಳ ವಿವರವನ್ನು ಅನುಬಂಧ–1 (ಅ ಮತ್ತು ಬ)ದಲ್ಲಿ ನೀಡಲಾಗಿದೆ. ಮಂಜೂರಾದ ಅನುದಾನ ವಿವರ ಕೆಳಕಂಡಂತಿದೆ:

ಕ್ರ.ಸಂ.	ವರ್ಷ	ಮಂಜೂರಾದ ಅನುದಾನ
1.	2005–06	20.00
2.	2006–07	20.50
	ಒಟ್ಟು	**40.50**

ಆ) 2005–06ನೇ ಸಾಲಿನ ಎಲ್ಲಾ ಕಾಮಗಾರಿಗಳನ್ನು ಮೆ.ಕಲ್ಲೂರ ಕನ್ಸ್‌ಟ್ರಕ್ಷನ್, ಗುತ್ತಿಗೆದಾರರು, ವರ್ಗ–1, ಇವರಿಗೆ ಟೆಂಡರ್ ಆಧಾರದ ಮೇಲೆ ವಹಿಸಿಕೊಡಲಾಗಿದ್ದು, ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ.

ಇ) ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಅನುಬಂಧ – 1 (ಅ)

ಕಿತ್ತೂರು ಮತಕ್ಷೇತ್ರದಲ್ಲಿ 2005–06 ನೇ ಸಾಲಿನಲ್ಲಿ ಲೆಕ್ಕ ಶೀರ್ಷಿಕೆ 5054 ರ ಅಡಿಯಲ್ಲಿ ಮಂಜೂರಾದ ಕಾಮಗಾರಿಗಳ ವಿವರ ಹಾಗೂ ಅನುದಾನ

ಕ್ರ.ಸಂ.	ಕಾಮಗಾರಿಯ ಹೆಸರು	ಮೂಲ ಮಂಜೂರಾದ ಅಂದಾಜು	05–06ನೇ ಸಾಲಿನ ಬಜೆಟ್ ಅಂದಾಜು
ಕಿತ್ತೂರ ಮತಕ್ಷೇತ್ರ (ಬೈಲಹೊಂಗಲ ತಾಲೂಕು)			
1.	ಎಂ.ಕೆ.ಹುಬ್ಬಳ್ಳಿ,ಚಿಕ್ಕಬಾಗೇವಾಡಿ ಜಿ.ಮು. ರಸ್ತೆಯ ಆಯ್ದ ಭಾಗಗಳಲ್ಲಿ ಮರುಡಾಂಬರೀಕರಣ	6.00	3.00
2.	ಎಂ.ಕೆ.ಹುಬ್ಬಳ್ಳಿ, ಹೊಳೆಹೊಸೂರ ನೇಗಿನ ಹಾಳ ಜಿಮು ರಸ್ತೆಯ ಆಯ್ದ ಭಾಗಗಳಲ್ಲಿ ಮರು ಡಾಂಬರೀಕರಣ	10.00	5.00
3.	ಕಿಕ್ಕೇರಿ, ಬೈಲೂರ, ತಿಗಡೊಳ್ಳಿ ದೇವರತೀಗಿಹಳ್ಳಿ ರಸ್ತೆ ಆಯ್ದ ಭಾಗಗಳಲ್ಲಿ ಮರು ಡಾಂಬರೀಕರಣ	8.00	4.00
4.	ಸಂಗೊಳ್ಳಿ ಕಿತ್ತೂರ ರಸ್ತೆಯ ಆಯ್ದ ಭಾಗಗಳಲ್ಲಿ ಮರುಡಾಂಬರೀಕರಣ ಹಾಗೂ ತಿಗಡಿ ರಸ್ತೆಯ ಆಯ್ದ ಭಾಗಗಳಲ್ಲಿ ಮರು ಡಾಂಬರೀಕರಣ	10.00	5.00
5.	ಮಲ್ಲಾಪೂರ–ಅವರಾದಿ–ಜಮಳೂರ ಖೋದಾನಪುರ ರಸ್ತೆಯ ಆಯ್ದ ಭಾಗ ಮರು ಡಾಂಬರೀಕರಣ	6.00	3.00
	ಒಟ್ಟು	**40.00**	**20.00**

ಅನುಬಂಧ–1 (ಬಿ)

ಕಿತ್ತೂರ ಮತಕ್ಷೇತ್ರದಲ್ಲಿ 2006–07ನೇ ಸಾಲಿನಲ್ಲಿ ಲೆಕ್ಕ ಶೀರ್ಷಿಕೆ 5054ರ ಅಡಿಯಲ್ಲಿ ಮಂಜೂರಾದ ಕಾಮಗಾರಿಗಳ ವಿವರ ಹಾಗೂ ಅನುದಾನ

1.	ಎಂ.ಕೆ. ಹುಬ್ಬಳ್ಳಿ, ಚಿಕ್ಕಬಾಗೇವಾಡಿ ಜಿ.ಮು.ರಸ್ತೆಯ ಆಯ್ದ ಭಾಗಗಳಲ್ಲಿ ಮರು ಡಾಂಬರೀಕರಣ	6.00	2.00
2.	ಎಂ.ಕೆ.ಹುಬ್ಬಳ್ಳಿ, ಹೊಳೆಹೊಸೂರ ನೇಗಿನ ಹಾಳ ಜಿಮು ರಸ್ತೆಯ ಆಯ್ದ ಭಾಗಗಳಲ್ಲಿ ಮರು ಡಾಂಬರೀಕರಣ	10.00	3.00
3.	ಕಿಕ್ಕೇರಿ, ಬೈಲೂರ, ತಿಗಡೊಳ್ಳಿ ದೇವರತೀಗಿಹಳ್ಳಿ ರಸ್ತೆ ಆಯ್ದ ಭಾಗಗಳ್ಲಿ ಮರು ಡಾಂಬರೀಕರಣ	8.00	3.00
4.	ಸಂಗೊಳ್ಳಿ ಕಿತ್ತೂರ ರಸ್ತೆಯ ಆಯ್ದ ಭಾಗಗಳಲ್ಲಿ ಮರು ಡಾಂಬರೀಕರಣ ಹಾಗೂ ತಿಗಡಿ ರಸ್ತೆಯ ಆಯ್ದ ಭಾಗಗಳಲ್ಲಿ ಮರು ಡಾಂಬರೀಕರಣ	10.00	3.00
5.	ಮಲ್ಲಾಪೂರ–ಅವರಾದಿ–ಜಮಳೂರ ಖೋದಾನಪುರ ರಸ್ತೆಯ ಆಯ್ದ ಭಾಗ ಮರು ಡಾಂಬರೀಕರಣ	6.00	2.00
6.	ಎಂ.ಕೆ.ಹುಬ್ಬಳ್ಳಿ ಹೊಳೆಹೆಬಸೂರ ನೇರಿಹಾಳ ರಸ್ತೆಯ ಆಯ್ದ ಭಾಗಗಳಲ್ಲಿ ಮರು ಡಾಂಬರೀಕರಣ	25.00	7.50
	ಒಟ್ಟು	**65.00**	**20.50**